ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

**ಸಿ.ಸಿ. ನಂ. 113/2017**

ಸಿ.ಡಬ್ಲ್ಯೂ-2 ಪಿ.ಡಬ್ಲ್ಯೂ -2

ದಿಃ **14.03.2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಮಂಡಮ್ಮ |
| ಗಂಡ/ತಂದೆಯ ಹೆಸರು | ಸಿದ್ದೇಗೌಡ |
| ವಯಸ್ಸು | ಸುಮಾರು 50 ವರ್ಷ |
| ಕೆಲಸ | ಗೃಹಿಣಿ |
| ವಾಸಸ್ಥಳ | ಮೊದುರು ಪಿ.ಕೊಪ್ಪಲು ಗ್ರಾಮ |

( 2 ರಿಂದ 4 ನೇ ಆರೋಪಿತರು ಗೈರುಹಾಜರಿದ್ದು, ಅವರ ಗುರುತನ್ನು ತಕರಾರು ಮಾಡುವುದಿಲ್ಲ ಎಂಬ ಷರತ್ತಿಗೆ ಒಳಪಟ್ಟಂತೆ ಸಾಕ್ಷ್ಯ ತೆಗೆದುಕೊಳ್ಳಲಾಯಿತು).

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ನನ್ನ ಮಗ. ಈಗ್ಗೆ 8 ವರ್ಷದ ಒಳಗೆ ಸಂಜೆ 5-00 ಗಂಟೆ ಸಮಯದಲ್ಲಿ ನಮ್ಮ ಜಾಗದಲ್ಲಿ ನಾವು ದನ ಕಟ್ಟಿ ಹಾಕಿದ್ದು, 1 ನೇ ಆರೋಪಿ ಸೊಪ್ಪು ಕಟ್ಟಿ ಹಾಕುತ್ತಿದ್ದವ, ಇಲ್ಲಿ ಯಾಕೆ ದನ ಕಟ್ಟಿ ಹಾಕಿದ್ದೀಯಾ ಸೂಳೆ ಮಗನೆ ಎಂದು ಅವಾಚ್ಯವಾಗಿ ಬೈದು, ಚಾಸಾ-1 ರವರನ್ನು 1 ನೇ ಆರೋಪಿ ಹಿಡಿದುಕೊಂಡಿದ್ದು, 2 ನೇ ಆರೋಪಿ ದೊಣ್ಣೆಯಿಂದ ತಲೆಗೆ ಹಾಗೂ ಬಲಗಾಲಿನ ತೊಡೆಗೆ ಹಲ್ಲೆ ಮಾಡಿರುತ್ತಾನೆ. ನಾನು ಬಿಡಿಸಲು ಮುಂದಾದಾಗ 3 ಮತ್ತು 4 ನೇ ಆರೋಪಿತರು ನನ್ನ ತಲೆ ಕೂದಲು ಹಿಡಿದು ಎಳೆದಿದ್ದು, ಆರೋಪಿತರೆಲ್ಲರೂ ಸೇರಿ ನನ್ನ ಮೈಕೈ ಪರಚಿರುತ್ತಾರೆ. ಗಲಾಟೆಯಾದ ನಂತರ ನಾವು ಹಾಗೂ ಆರೋಪಿತರೆಲ್ಲರೂ ಆಸ್ಪತ್ರೆಗೆ ಬಂದು ದಾಖಲಾದೆವು. 1 ನೇ ಆರೋಪಿಗೆ ರಕ್ತ ಬಂದಿತ್ತು. ನ್ಯಾಯಾಲಯದ ಮುಂದಿರುವ ಮು.ಮಾ-1 ರಿಂದಲೇ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ. ನನ್ನ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತರಿಗೂ, ನಮಗೂ ಭೂಮಿಯ ವಿಚಾರವಾಗಿ ಜಗಳವಾಗಿರುತ್ತದೆ.

**<u>ಪಾಟೀಸವಾಲುಃ  ಆರೋಪಿತರ ಪರ ಶ್ರೀ ಹೆಚ್.ವಿ.ವಿ.  ವಕೀಲರಿಂದಃ</u>**

ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಸಕಾರಣಗಳು ಇಲ್ಲದೇ ಇರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.